**SC No. 205/2022**
**PW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆಃ 57)
ನಮೂನೆ ಸಂಖ್ಯೆಃ 4

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂಃ 205/22

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹೇಶ ಪಾಟೀಲ | ಪ್ರಾಸಾಃ 1 |
| ತಂದೆಯ ಹೆಸರು | : | ಮುರುಳಿಧರ ಪಾಟೀಲ | ಚಾಸಾಃ 2 |
| ಪ್ರಾಯ | : | 46 ವರ್ಷ | ದಿನಾಂಕ 04.12.2024 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಬುರಣಕಿ, ತಾಲ್ಲೂಕಃ ಖಾನಾಪೂರ | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-1 ಇಸ್ಮಾಯಿಲ್ ಬೀಡಿ, ಚಾಸಾ-10 ಹಸೀನಾ ಬೀಡಿ ಮತ್ತು ಚಾಸಾ-11 ಸುಭಾನಿ ಬೀಡಿ ನನಗೆ ಗೊತ್ತು. ಚಾಸಾ-12 ಮಹಮ್ಮದಶಮಿ ಇಟಗಿ, ಚಾಸಾ-13 ಮುಕ್ತುಮಹುಸೇನ್ ಸಾವುಕಾರ, ಚಾಸಾ-14 ಸುಭಾನಿ ದೇಶನೂರ, ಚಾಸಾ-14 ದಾದಾಫೀರ ಹುದಲಿ ಮತ್ತು ಚಾಸಾ-16 ಮುಮ್ತಾಜ ಕಿತ್ತೂರ ಸಹ ನನಗೆ ಗೊತ್ತು. ಚಾಸಾ-1 ಇಸ್ಮಾಯಿಲ್ ಬೀಡಿ ಇವರಿಗೆ ಒಂದು ಗಂಡು ಮಗ ಮತ್ತು ಇಬ್ಬರೂ ಹೆಣ್ಣು ಮಗಳು. ಚಾಸಾ-1 ನೇಯವರ ಇಬ್ಬರು ಹೆಣ್ಣು ಮಕ್ಕಳಲ್ಲಿ ಒಬ್ಬಳು ಶಭಾನಾ ಮತ್ತು ಆರೀಫಾ.

2. ಶಭಾನಾ ಅವಳನ್ನು ಸವದತ್ತಿ ತಾಲ್ಲೂಕಿನ ಮುನವಳ್ಳಿಯ ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರು ಪಡಿಸಿರುವ ಆರೋಪಿಗೆ 2012-2013 ರಲ್ಲಿ ಮದುವೆ ಮಾಡಿಕೊಡಲಾಗಿತ್ತು. ಚಾಸಾ-1 ನೇಯವರ ಎರಡನೇ ಮಗಳು ಆರಿಫಾಳನ್ನು ಸವದತ್ತಿ ತಾಲ್ಲೂಕಿನ ಯಕ್ಕುಂಡಿಗೆ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ನಂತರ ಶಭಾನಾ ಆರೋಪಿ ಜೊತೆ ಮುನವಳ್ಳಿಯಲ್ಲಿ ವಾಸ ಮಾಡುತ್ತಿದ್ದಳು. ನಂತರ ಆಕೆ ಸವದತ್ತಿಯಲ್ಲಿ ವಾಸ ಮಾಡುತ್ತಿದ್ದಳು ಎಂದು ಚಾಸಾ-1 ರವರಿಂದ ನನಗೆ ತಿಳಿಯಿತು.

3. ದಿನಾಂಕ 18.08.2022 ರಂದು ಬೆಳಿಗ್ಗೆ ಸುಮಾರು 10.30 -11.00 ಗಂಟೆ ಸಮಯದಲ್ಲಿ ಚಾಸಾ-1 ನೇಯವರು ನನ್ನ ಮನೆಯ ಬಳಿ ಬಂದು ನನ್ನಲ್ಲಿ ತನ್ನ ಮಗಳ ಶಭಾನಾಳ ಶೀಲ ಶಂಕಿಸಿ ಆಕೆಯನ್ನು ಆರೋಪಿ ಕೊಲೆ ಮಾಡಿರುತ್ತಾನೆ ಮತ್ತು ಈ ಬಗ್ಗೆ ಸವದತ್ತಿಯಲ್ಲಿರುವ ಶಭಾನಾಳ ಮನೆಗೆ ಬನ್ನಿ ಎಂದು ಹೇಳಿರುತ್ತಾನೆ. ಅದರಂತೆ ನಾನು, ಚಾಸಾ-15, ಚಾಸಾ-14, ಚಾಸಾ-12, ಚಾಸಾ-13 ಮತ್ತು ಚಾಸಾ-11, ಮತ್ತು ಆತನ ತಾಯಿ ಚಾಸಾ-10 ಹಸೀನಾ ಸವದತ್ತಿಗೆ ಹೋಗಿರುತ್ತೇವೆ. ನಮ್ಮ ಜೊತೆ ಚಾಸಾ-16 ಮುಮ್ತಾಜ ಸಹ ಬಂದಿರುತ್ತಾರೆ. ಆ ದಿನ ನಮ್ಮ ಊರನ್ನು ನಾವು ಬೆಳಿಗ್ಗೆ 11.00 ಗಂಟೆಗೆ ಬಿಟ್ಟಿದ್ದು, ಸವದತ್ತಿ ತಲುಪಿದಾಗ ಸಮಯ ಸುಮಾರು ಅಪರಾಹ್ನ 01.30 ಗಂಟೆಯಾಗಿತ್ತು. ಆ ದಿನ ಸವದತ್ತಿಗೆ ಹೋಗಿ ಅಯ್ಯಪ್ಪಾಸ್ವಾಮಿ ನಗರದಲ್ಲಿ ಶಭಾನಾ ವಾಸ ಮಾಡುತ್ತಿದ್ದ ಮನೆಗೆ ಹೋಗಿರುತ್ತೇವೆ.

3. ಸದರಿ ಮನೆಗೆ ಹೋಗಿ ನೋಡಿದಾಗ ಮನೆಯ ಬಾಗಿಲಲ್ಲಿ ರಕ್ತ ಬಿದ್ದಿತ್ತು. ಒಳಗಡೆ ಹೋಗಿ ನೋಡಿದಾಗ ರೂಮಿನೊಳಗೆ ಶಭಾನಾಳ ಶವ ಬಿದ್ದಿತ್ತು. ಆಕೆಯ ಪಕ್ಕದಲ್ಲಿ ಆಕೆಯ ಮಗಳು ಚಾಸಾ-4 ಆಲಿಯಾ ಕುಳಿತಿದ್ದಳು. ಶಭಾನಾಳ ಮೈಮೇಲೆಲ್ಲಾ ರಕ್ತ ಇತ್ತು ಮತ್ತು

ಕೆಳಗೆ ರಕ್ತ ಬಿದ್ದಿತ್ತು. ಶಭಾನಾಳ ಶವದ ಎದೆ, ಹೊಟ್ಟೆ ಮತ್ತು ಮೈಮೇಲೆಲ್ಲಾ ಚುಚ್ಚಿದ ಗಾಯಗಳಾಗಿದ್ದವು. ಕುತ್ತಿಗೆಯ ಮೇಲೆ ಅರ್ಧ ಕೊಯ್ದ ಗಾಯವಾಗಿತ್ತು. ಆ ಬಗ್ಗೆ ಚಾಸಾ-4 ನೇಯವಳನ್ನು ಚಾಸಾ-1 ನೇಯವರು ವಿಚಾರಿಸಿರುತ್ತಾರೆ. ಆಗ ಚಾಸಾ-4 ನೇಯವಳು ಚಾಸಾ-1 ನೇಯವನಲ್ಲಿ, ತನ್ನ ತಂದೆ ಒಂದು ಚಾಕು ತಂದು ತಾಯಿಗೆ ಚುಚ್ಚಿರುತ್ತಾನೆ ಮತ್ತು ತಾನು ಒದರಾಡಿದರೂ ತನ್ನ ತಂದೆ ತನ್ನ ತಾಯಿಯನ್ನು ಬಿಟ್ಟಿಲ್ಲ ಎಂದು ಹೇಳಿರುತ್ತಾನೆ. ನಂತರ ನಾವು ಪಕ್ಕದ ಮನೆಯಲ್ಲಿ ವಾಸವಿದ್ದ ಚೋಪಡೆ ಎನ್ನುವವರನ್ನು (ಚಾಸಾ-5) ವಿಚಾರಿಸಿರುತ್ತೇವೆ. ಆಗ ಅವರು ನಮ್ಮಲ್ಲಿ ಆ ದಿನ ಬೆಳಿಗ್ಗೆ ಸುಮಾರು 10.30 ಗಂಟೆ ಸಮಯದಲ್ಲಿ ರೊಟ್ಟಿ ತಿನ್ನುತ್ತಿದ್ದಾಗ ಶಭಾನಾಳ ಮನೆಯಿಂದ ಗಲಾಟೆಯ ಶಬ್ದ ಕೇಳಿ ನಾವು ಓಡಿ ಹೋಗಿ ಮನೆಯಲ್ಲಿ ನೋಡಿದಾಗ ಶಭಾನಾ ಕೆಳಗೆ ಬಿದ್ದಿದ್ದಳು ಮತ್ತು ಆರೋಪಿ ಅಲ್ಲಿದ್ದ ಮತ್ತು ನಮ್ಮನ್ನು ನೋಡಿ ಆರೋಪಿ ಏನೂ ಮಾತನಾಡದೇ ಮುಂದಿನ ಬಾಗಿಲು ತೆಗೆದು ಓಡಿ ಹೋಗಿರುತ್ತಾನೆ ಮತ್ತು ಆ ಸಮಯದಲ್ಲಿ ಆರೋಪಿಯ ಕೈಯಲ್ಲಿ ಒಂದು ದೊಡ್ಡ ಚಾಕು ಇತ್ತು ಎಂದು ತಿಳಿಸಿರುತ್ತಾನೆ.

4. ನಂತರ ಚಾಸಾ-1 ನೇಯವನು ಅಲ್ಲಿಂದ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತಾನೆ. ನಂತರ ಪೋಲಿಸರು ಸ್ಥಳಕ್ಕೆ ಬಂದು ನಮ್ಮನ್ನು ವಿಚಾರಿಸಿ ಪಂಚನಾಮೆಗೆ ಸಾಕ್ಷಿಯಾಗುವಂತೆ ಕೇಳಿ ನನಗೆ ಮತ್ತು ಚಾಸಾ-3 ಇಮಾಮಸಾಬ್ ಸನದಿ ಹಾಗೂ ಚಾಸಾ-16 ಮುಮ್ತಾಜ ಅವರಿಗೆ ನೋಟಿಸ್ಸ ಕೊಟ್ಟಿರುತ್ತಾರೆ. ಈ ತೋರಿಸಿದ ದಾಖಲೆಯು ಸದರಿ ನೋಟಿಸ್ಸು ಆಗಿದ್ದು, ಅದನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟಿಸ್ಸನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಸ್ಥಳದಲ್ಲಿ ನಮ್ಮ ಸಮಕ್ಷಮ ಪೋಲಿಸರು 03.15 ರಿಂದ ಸುಮಾರು ಮುಕ್ಕಾಲು ಗಂಟೆ ಸಮಯ ಶವ ಪಂಚನಾಮೆ ಮಾಡಿರುತ್ತಾರೆ. ಸದರಿ

ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಈಗ ತೋರಿಸಿದ ದಾಖಲೆಯು ಸದರಿ ಶವ ಪಂಚನಾಮೆಯಾಗಿದ್ದು, ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಶವವನ್ನು ನೋಡಿದಾಗ ಶವದ ಮೈಮೇಲೆ ಈ ಮೇಲೆ ಹೇಳಿದ ಗಾಯಗಳಾಗಿದ್ದವು ಮತ್ತು ಎರಡು ಮೊನಕೈಗಳ ಮೇಲೆ ಗಾಯಗಳು ಇದ್ದವು. ಪಂಚನಾಮೆಯ ಸಂದರ್ಭದಲ್ಲಿ ಪೋಲಿಸರು ಸ್ಥಳದಲ್ಲಿ ಪೋಟೊ ತೆಗೆದಿರುತ್ತಾರೆ. ಈಗ ತೋರಿಸಿದ ನಾಲ್ಕು ಪೋಟೊಗಳು ಸದರಿ ಪೋಟೊಗಳಾಗಿರುತ್ತವೆ. ಅವುಗಳನ್ನು ನಿಪಿ-3 ರಿಂದ ನಿಪಿ-6 ಎಂದು ಗುರುತಿಸಲಾಯಿತು.

5. ನಂತರ ಶಭಾನಾಳ ಶವವನ್ನು ಪೋಲಿಸರು ಸವದತ್ತಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಂತರ ಚಾಸಾ-1 ನೇಯವರು ಪೋಲಿಸರಿಗೆ ಶಭಾನಾ ಕೊಲೆಯಾದ ಜಾಗೆಯನ್ನು ತೋರಿಸಿರುತ್ತಾನೆ. ಆ ಸಂದರ್ಭದಲ್ಲಿ ಪೋಲಿಸರು ಸದರಿ ಸ್ಥಳದಲ್ಲಿ ಸುಮಾರು ಮುಕ್ಕಾಲು ಗಂಟೆ ಸಮಯ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಪೋಲಿಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಈಗ ತೋರಿಸಿದ ದಾಖಲೆಯು ಸದರಿ ಸ್ಥಳ ಪಂಚನಾಮೆಯಾಗಿದ್ದು, ಅದನ್ನು ನಿಪಿ-7 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ರಕ್ತ ಬಿದ್ದಿದ್ದು, ಸದರಿ ರಕ್ತದ ಮಾದರಿಯನ್ನು ಪೋಲಿಸರು ಹತ್ತಿಯಲ್ಲಿ ಸಂಗ್ರಹಿಸಿರುತ್ತಾರೆ. ಸ್ಥಳದಲ್ಲಿ ಶಭಾನಾಳ ಬಳೆ ಚೂರು ಮತ್ತು ಒಂದು ಬಿಳಿ ಬಣ್ಣದ ದುಪ್ಪಟ್ಟಾ ಬಿದ್ದಿತ್ತು. ಅವುಗಳನ್ನು ಸಹ ಪೋಲಿಸರು ಜಪ್ತಿ ಮಾಡಿಕೊಂಡಿರುತ್ತಾರೆ. ಗೋಡೆಯ ಮೇಲೆ ಬಿದ್ದಿದ್ದ ರಕ್ತದ ಮಾದರಿಯನ್ನು ಸಹ ಪೋಲಿಸರು ಸಂಗ್ರಹಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ಒಂದು ಮೊಬೈಲ್ ಬಿದ್ದಿದ್ದು, ಅದನ್ನು ಸಹ ಪೋಲಿಸರು ಜಪ್ತಿ ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಸ್ಥಳದಲ್ಲಿ ಪೋಟೊ ತೆಗೆಸಿರುತ್ತಾರೆ. ಈಗ ತೋರಿಸಿದ ಏಳು

ಪೋಟೊಗಳು ಸ್ಥಳದಲ್ಲಿ ತೆಗೆಸಿದ ಪೋಟೊಗಳಾಗಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ-8 ರಿಂದ ನಿಪಿ-14 ಎಂದು ಗುರುತಿಸಲಾಯಿತು. ನಿಪಿ-14 ಪೋಟೊದಲ್ಲಿ ಡೋರಮ್ಯಾಟ ಇರುತ್ತದೆ. ಅದರಲ್ಲಿ ರಕ್ತದ ಕಲೆಗಳಾಗಿದ್ದು, ಸದರಿ ಡೋರಮ್ಯಾಟನ್ನು ಸಹ ಪೋಲಿಸರು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. (ಈಗ ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿದ ಆರು ಪ್ಯಾಕೇಟಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ರಕ್ತದ ಕಲೆಗಳು ಇರುವ ಕಾಟನ್ ಸ್ವ್ಯಬ್, ಮಾದರಿ ಕಾಟನ್ ಸ್ವ್ಯಾಬ್, ರಕ್ತದ ಕಲೆಗಳಿರುವ ಒಂದು ಬಟ್ಟೆ, ರಕ್ತದ ಕಲೆಗಳಿರುವ ಒಂದು ಡೋರಮ್ಯಾಟ್, ಬಳೆಚೂರುಗಳು ಮತ್ತು ಒಂದು ಮೊಬೈಲ್ ಪೋನ್ ಇರುತ್ತವೆ.) ಸದರಿ ವಸ್ತುಗಳು ಈ ಮೇಲೆ ಹೇಳಿದಂತೆ ಪೋಲಿಸರು ಸ್ಥಳದಲ್ಲಿ ಅಮಾನತು ಪಡಿಸಿರುವ ವಸ್ತುಗಳಾಗಿದ್ದು, ಅವುಗಳನ್ನು ಅನುಕ್ರಮವಾಗಿ ಮುಮಾ-1 ರಿಂದ ಮುಮಾ-6 ಎಂದು ಗುರುತಿಸಲಾಯಿತು. ಮುಮಾ-4 ಡೋರಮ್ಯಾಟ ಪೋಲಿಸರು ಅಮಾನತು ಪಡಿಸಿರುವ ಮನೆಯೊಳಗೆ ಇದ್ದ ಡೋರಮ್ಯಾಟ ಆಗಿರುತ್ತದೆ.

6. ನಂತರ ಅದೇ ಪೋಲಿಸರು ನನ್ನನ್ನು ಮತ್ತು ಚಾಸಾ-3 ನೇಯವರನ್ನು ಪೋಲಿಸರು ರಾತ್ರಿ 08.00 ಗಂಟೆಗೆ ಪೋಲಿಸ ಠಾಣೆಗೆ ಕರೆಸಿರುತ್ತಾರೆ. ಅದರಂತೆ ನಾವು ಪೋಲಿಸ ಠಾಣೆಗೆ ಹೋಗಿದ್ದು, ಅಲ್ಲಿ ಆರೋಪಿ ಇದ್ದ. ಆ ಸಂದರ್ಭದಲ್ಲಿ ಆರೋಪಿಯು ತಾನು ಶಭಾನಾಳಿಗೆ ಚುಚ್ಚಲು ಉಪಯೋಗಿಸಿದ ಚಾಕು ಎಂದು ಹೇಳಿ ಒಂದು ಚಾಕುವನ್ನು ಪೋಲಿಸರ ಮುಂದೆ ಹಾಜರು ಪಡಿಸಿರುತ್ತಾನೆ. ಸದರಿ ಚಾಕುವನ್ನು ಪ್ಯಾಕ್ ಮಾಡಿ ಸೀಲ್ ಮಾಡಿ ಪೋಲಿಸರು ವಶಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ರಾತ್ರಿ 08.00 ರಿಂದ 08.30 ಗಂಟೆ ಸಮಯದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ನನ್ನ ಸಹಿ ಮಾಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಪಂಚನಾಮೆಯಾಗಿದ್ದು, ಅದನ್ನು ನಿಪಿ-15 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-15(ಎ) ಎಂದು

ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರು ಪೋಟೊಗಳನ್ನು ತೆಗೆಸಿರುತ್ತಾರೆ. ಈಗ ತೋರಿಸಿದ ಎರಡು ಪೋಟೊಗಳು ಸದರಿ ಪೋಟೊಗಳಾಗಿದ್ದು, ಅವುಗಳನ್ನು ನಿಪಿ-16 ಮತ್ತು ನಿಪಿ-17 ಎಂದು ಗುರುತಿಸಲಾಯಿತು. ನಿಪಿ-17 ರಲ್ಲಿರುವ ಚಾಕು ಸದರಿ ಚಾಕುವಾಗಿರುತ್ತದೆ. ಸದರಿ ಚಾಕುವನ್ನು ಈಗ ನಾನು ನೋಡಿದರೇ ಗುರುತಿಸಬಲ್ಲೆ. (ಈಗ ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿದ ಒಂದು ಪ್ಯಾಕೇಟನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಚಾಕು ಇರುತ್ತದೆ.) ಸದರಿ ಚಾಕು ಪೋಲಿಸರು ಈ ಮೇಲೆ ಹೇಳಿದಂತೆ ಅಮಾನತು ಪಡಿಸಿದ ಚಾಕುವಾಗಿದ್ದು, ಅದನ್ನು ಮುಮಾ-7 ಎಂದು ಗುರುತಿಸಲಾಯಿತು.

7. ನಂತರ ಆರೋಪಿಯು ಕೃತ್ಯ ನಡೆದ ಸಮಯದಲ್ಲಿ ತಾನು ಧರಿಸಿದ ಬಟ್ಟೆಗಳನ್ನು ಪೋಲಿಸರ ಮುಂದೆ ಹಾಜರು ಪಡಿಸುತ್ತಾನೆ. ಸದರಿ ಬಟ್ಟೆಗಳು ರಕ್ತದ ಕಲೆಗಳಾಗಿದ್ದ ಗುಲಾಬಿ ಬಣ್ಣದ ತುಂಬು ತೋಳಿನ ಶರ್ಟ, ಒಂದು ರಕ್ತದ ಕಲೆಗಳಾಗಿದ್ದ ಜಿನ್ಸ ಪ್ಯಾಂಟ್ ಮತ್ತು ಒಂದು ಮೊಬೈಲ್‌ನ್ನು ಹಾಜರು ಪಡಿಸಿರುತ್ತಾನೆ. ಅವುಗಳನ್ನು ಈಗ ನೋಡಿದರೇ ಗುರುತಿಸಬಲ್ಲೆ. (ಈಗ ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿದ ಮೂರು ಪ್ಯಾಕೇಟಗಳನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಶರ್ಟ, ಒಂದು ಪ್ಯಾಂಟ್ ಮತ್ತು ಒಂದು ಮೊಬೈಲ್ ಪೋನ್ ಇರುತ್ತವೆ.) ಸದರಿ ಬಟ್ಟೆಗಳು ಮತ್ತು ಮೊಬೈಲ್ ಪೋನ್ ಪೋಲಿಸರು ಆರೋಪಿಯಿಂದ ಅಮಾನತು ಪಡಿಸಿದ ವಸ್ತುಗಳಾಗಿದ್ದು, ಅವುಗಳನ್ನು ಅನುಕ್ರಮವಾಗಿ ಮುಮಾ-8 ರಿಂದ ಮುಮಾ-10 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರು ರಾತ್ರಿ 09.30 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ನನ್ನ ಸಹಿ ಮಾಡಿರುತ್ತೇನೆ. ಈಗ ತೋರಿಸಿದ ದಾಖಲೆ ಸದರಿ ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಪಿ-18 ಎಂದು ಮತ್ತು ಅದರಲ್ಲಿರುವ ನನ್ನ

ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಸಮಯದಲ್ಲಿ ಪೋಲಿಸರು ಪೋಟೊಗಳನ್ನು ತೆಗೆದಿರುತ್ತಾರೆ. ಈಗ ತೋರಿಸಿರುವ ಐದು ಪೋಟೊಗಳು ಸದರಿ ಪೋಟೊಗಳಾಗಿದ್ದು, ಅವುಗಳನ್ನು ನಿಪಿ-19 ರಿಂದ ನಿಪಿ-23 ಎಂದು ಗುರುತಿಸಲಾಯಿತು. ನಿಪಿ-22 ಮತ್ತು ನಿಪಿ-23 ಪೋಟೊಗಳಲ್ಲಿರುವ ಮೊಬೈಲ್ ಆರೋಪಿಯಿಂದ ವಶಪಡಿಸಿಕೊಂಡ ಮೊಬೈಲ್‌ಪೋನ್ ಆಗಿರುತ್ತದೆ.

8. ನಂತರ ಮರುದಿನ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-3 ರವರನ್ನು ಪುನಃ ಠಾಣೆಗೆ ಕರೆಯಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಮೃತ ಶಭಾನಾಳ ಮೈಮೇಲಿದ್ದ ಬಟ್ಟೆಗಳನ್ನು ಪೋಲಿಸರು ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ನನ್ನ ಸಹಿ ಮಾಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಪಿ-24 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳಲ್ಲಿ ಒಂದು ಬಿಳಿ ಬಣ್ಣದ ಓಡ್ನಿ, ಗುಲಾಬಿ ಬಣ್ಣದ ಬ್ರಾ, ನೀಲಿ ಬಣ್ಣದ ನಿಕ್ಕರ, ನೀಲಿ ಬಣ್ಣದ ಹೂವಿನ ಡಿಜೈನ್ ಇರುವ ಒಂದು ನೈಟಿ ಮತ್ತು ಒಂದು ನೀಲಿ ಬಣ್ಣದ ಲಂಗಾ ಇತ್ತು. ಸದರಿ ಬಟ್ಟೆಗಳನ್ನು ಈಗ ನಾನು ನೋಡಿದರೇ ಗುರುತಿಸಬಲ್ಲೆ. (ಈಗ ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿದ ಐದು ಪ್ಯಾಕೇಟಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ಒಂದು ಓಡ್ನಿ, ಒಂದು ಬ್ರಾ, ಒಂದು ನೈಟಿ, ಒಂದು ಪರಕಾರ ಮತ್ತು ಒಂದು ನಿಕ್ಕರ ಇರುತ್ತದೆ.) ಸದರಿ ಬಟ್ಟೆಗಳು ಪೋಲಿಸರು ಈ ಮೇಲೆ ಹೇಳಿದಂತೆ ಅಮಾನತು ಪಡಿಸಿದ ವಸ್ತುಗಳಾಗಿರುತ್ತವೆ. ಅವುಗಳನ್ನು ಮುಮಾ-11 ರಿಂದ ಮುಮಾ-15 ಎಂದು ಗುರುತಿಸಲಾಯಿತು.

9. ಈ ಕೇಸಿಗೆ ಸಂಬಂಧಪಟ್ಟಂತೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು, ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ಈಗ ನೋಡಿದರೇ ಗುರುತಿಸಬಲ್ಲೆ. ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರು ಪಡಿಸಿರುವ ಆರೋಪಿ ಸದರಿ ಆರೋಪಿಯಾಗಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಎಸ್ ಕೆ ಪಿ (ಡಿ ಎಲ್ ಎಸ್ ಎ) ವಕೀಲರಿಂದಃ

10. ಚಾಸಾ-1 ನೇಯವರು ಸಹ ನನ್ನ ಊರಿನವರು ಎಂದರೆ ಸರಿ. ನನಗೆ ಚಾಸಾ-1 ನೇಯವರು ಸುಮಾರು 10 ವರ್ಷಗಳಿಂದ ಪರಿಚಿತರಾಗಿರುತ್ತಾರೆ. ಚಾಸಾ-1 ಮತ್ತು ಅವರ ಕುಟುಂಬದವರು ಸುಮಾರು 15-20 ವರ್ಷಗಳಿಂದ ನನ್ನ ಊರಿನಲ್ಲಿ ವಾಸ ಮಾಡುತ್ತಿದ್ದರು. ನಾನು ನನ್ನ ಊರಿನಲ್ಲಿ ಪಂಚನಾಗಿರುತ್ತೇನೆ ಎಂದರೆ ಸರಿ. ಚಾಸಾ-3 ನೇಯವರು ಸಹ ನಮ್ಮ ಊರಿನಲ್ಲಿ ಪಂಚನಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ನನ್ನ ಊರಿನಲ್ಲಿ ನಂದಗಡ ಪೋಲಿಸ ಠಾಣೆಗೆ ಹೋಗಿ ಯಾವುದೇ ಕೇಸಿನ ಬಗ್ಗೆ ಪಂಚಾಯಿತಿಕೆಯ ಬಗ್ಗೆ ಓಡಾಡುತ್ತೇನೆ ಎಂದರೆ ಸರಿ. ಊರಲ್ಲಿ ಯಾವುದೇ ಮದುವೆಯ ಮಾತುಕತೆಯಲ್ಲಿ ನಾನು ಹಿರಿಯತನ ವಯಸುತ್ತೇನೆ ಎಂದರೆ ಸರಿ. ಶಬಾನಾಳ ಮದುವೆ ಮಾತುಕತೆಯಲ್ಲಿ ನಾನು ಭಾಗವಹಿಸಿದ್ದೆ ಎಂದರೆ ಸರಿಯಲ್ಲ.

11. ಮುಸ್ಲಿಮ್ ಜನಾಂಗದಲ್ಲಿ ಮದುವೆಯನ್ನು ಹೆಣ್ಣಿನ ಕಡೆಯವರು ಮಾಡುತ್ತಾರೆ ಎಂದರೆ ಸರಿ. ಶಬಾನಾ ಮತ್ತು ಆರೋಪಿಯ ಮದುವೆಗೆ ನಾನು ಹೋಗಿಲ್ಲ. ಶಬಾನಾಳ ಮದುವೆ ಎಲ್ಲಿ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಶಬಾನಾಳ ಮದುವೆಯ ನಂತರ ನಾನು ಆರೋಪಿಯ ಬಗ್ಗೆ ವಿಷಯ ಕೇಳಿ ತಿಳಿದುಕೊಂಡಿಲ್ಲ, ಆರೋಪಿಯ ಬಗ್ಗೆ ವಿಷಯವನ್ನು

ಚಾಸಾ-1 ರವರು ಸಹ ನನಗೆ ಹೇಳಿಲ್ಲ. ಮುನವಳ್ಳಿಯಲ್ಲಿ ಶಬಾನಾ ಆರೋಪಿಯ ಜೊತೆ ವಾಸಮಾಡುತ್ತಿದ್ದಾಗ ಆಕೆಯ ಮತ್ತು ಆರೋಪಿಯ ಸಂದಬಂಧ ಚೆನ್ನಾಗಿತ್ತು ಎಂದರೆ ಸರಿ. ಬುರಣಕ್ಕಿ ಸುಮಾರು 2-3 ಸಾವಿರ ಜನಸಂಖ್ಯೆ ಇರುವ ಸಣ್ಣ ಊರು ಎಂದರೆ ಸರಿ. ಆರೋಪಿ ಮತ್ತು ಶಬಾನಾಳಿಗೆ ಇಬ್ಬರು ಮಕ್ಕಳು ಎಂದು ನಾನು ತಿಳಿದುಕೊಂಡಿರುತ್ತೇನೆ. ಅವರಲ್ಲಿ ಒಂದು ಗಂಡು ಮಗು, ಇನ್ನೊಬ್ಬಳು ಹೆಣ್ಣುಮಗಳು. ಮುನವಳ್ಳಿಯಲ್ಲಿ ವಾಸಮಾಡುತ್ತಿದ್ದಾಗ ಶಬಾನಾಳಿಗೆ ಒಂದು ಮುಸ್ಲಿಮ್ ಹುಡುಗನ ಜೊತೆಗೆ ಸಂಬಂಧ ಇತ್ತು ಎಂದರೆ ಸದರಿ ವಿಷಯವನ್ನು ಚಾಸಾ-1 ರವರು ನನಗೆ ಹೇಳಿರುತ್ತಾರೆ ಅಂದರೆ ಆರೋಪಿಗೆ ಶಬಾನಳ ಮೇಲೆ ಆ ಬಗ್ಗೆ ಸಂಶೆ ಇತ್ತು ಎಂದು ಹೇಳಿರುತ್ತಾರೆ. ಆ ಬಗ್ಗೆ ಚಾಸಾ-1 ಮತ್ತು ಆತನ ಮನೆಯವರು ಮುನವಳ್ಳಿಗೆ ಹೋಗಿ ಪಂಚಾಯತಿ ಮಾಡಸಿ ಶಬಾನಾಳಿಗೆ ಬುದ್ದಿವಾದ ಹೇಳಿದ್ದರು ಎಂದರೆ ಸರಿ. ಆ ನಂತರ ಆರೋಪಿಯು ಶಬಾನಾಳಿಗಾಗಿ ಸವದತ್ತಿಯಲ್ಲಿ ಬಾಡಿಗೆ ಮನೆ ಮಾಡಿ ಅಲ್ಲಿ ಆಕೆಯ ಜೊತೆಗೆ ವಾಸ ಮಾಡುತ್ತಿದ್ದ ಎಂದರೆ ಸರಿ.

12. ನಂತರ ಸವದತ್ತಿಯಲ್ಲಿ ವಾಸ ಮಾಡುತ್ತಿದ್ದಾಗ ಆರೋಪಿಯು ಚಾಸಾ-20 ಹುಸೇನಸಾಬ್ ಮಂಟೂರ ಇವರ ಐಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸವದತ್ತಿಯಲ್ಲಿ ಮನೆ ಮಾಡಿದ ನಂತರ ಸಹ ಶಭಾನಾಳಿಗೆ ಪರಪುರುಷರ ಜೊತೆ ಸಂಬಂಧ ಇಟ್ಟುಕೊಂಡಿರುವ ಚಾಳಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಐಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಕರೋನಾ ಸಮಯದಲ್ಲಿ ಆತನಿಗೆ ಅರ್ನಿಯಾ ಖಾಯಿಲೆ ಬಂದು ಆ ಬಗ್ಗೆ ಶಸ್ತ್ರ ಚಿಕಿತ್ಸೆ ಆಗಿ ಆತ ಮನೆಯಲ್ಲಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಯಾವುದೇ ಜಮೀನು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಕೂಲಿ ಮಾಡಿ ಮನೆ ನಡೆಸುತ್ತಿದ್ದ ಎಂಬುದು ನನಗೆ ಗೊತ್ತಿಲ್ಲ. ನಂತರ ಜೀವನ ಸಾಗಿಸುವುದಕ್ಕಾಗಿ ಶಭಾನಾ ಆರೋಪಿಯಲ್ಲಿ ತಾನು ಐಸ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತೇನೆಂದು ಐಸ್

ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಂತರ ಸಹ ಶಭಾನಾ ಪರಪುರುಷರ ಸಂಗದಲ್ಲಿರುವ ಚಾಳಿ ಬಿಟ್ಟಿಲ್ಲ ಎಂದು ಆ ಬಗ್ಗೆ ಆಕೆಯ ತಂದೆಯ ಮನೆಯವರು ಹಿರಿಯರನ್ನು ಸೇರಿಸಿ ಪಂಚಾಯಿತಿಕೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಶಭಾನಾಳ ಕಡೆಯಿಂದ ಆರೋಪಿ ವಿರುದ್ದ ಸವದತ್ತಿ ಮಹಿಳಾ ಸಂಘಕ್ಕೆ ಒಂದು ಸುಳ್ಳು ಪಿರ್ಯಾದಿ ಕೊಡಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಸುಳ್ಳು ಪಿರ್ಯಾದಿ ಕೊಡಿಸಿ ಆರೋಪಿಯಿಂದ ವಿಚ್ಛೇದನ ಪಡೆಯಬೇಕು ಎಂದು ಶಭಾನಾಳಿಗೆ ಇಚ್ಛೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಆ ಬಗ್ಗೆ ಸಂಧಾನವಾಗಿ ಶಭಾನಾಳು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಆರೋಪಿ ವಿರುದ್ದ ವಿವಾಹ ವಿಚ್ಛೇದನ ಪಡೆದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ವಿಚ್ಛೇದನ ಪಡೆದ ನಂತರ ಶಭಾನಾಳು ತನ್ನ ಮಗಳ ಜೊತೆ ಸವದತ್ತಿಯ ಅಯ್ಯಪ್ಪಸ್ವಾಮಿ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಜೀವನ ಮಾಡುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿಯು ಆತನ ಮಗನ ಜೊತೆ ಆತನ ತಾಯಿ ಮನೆ ಮುನವಳ್ಳಿಯಲ್ಲಿ ವಾಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ.

13. ಶಭಾನಾಳ ಕೊಲೆಯಾದ ವಿಚಾರವನ್ನು ಚಾಸಾ-1 ನೇಯವರಿಗೆ ಯಾರು ತಿಳಿಸಿದ್ದು ಎನ್ನುವ ವಿಷಯ ನನಗೆ ಗೊತ್ತಿಲ್ಲ. ವಿಷಯ ತಿಳಿದ ನಂತರ ನಾವು ಮೊದಲಿಗೆ ಸವದತ್ತಿಯಲ್ಲಿರುವ ಶಭಾನಾಳ ಮನೆಗೆ ಹೋಗಿರುತ್ತೇವೆ. ಸದರಿ ಮನೆಯ ಮುಂಬಾಗಿಲು ಯಾವ ದಿಕ್ಕಿನ ಕಡೆಗೆ ಇತ್ತು ಎಂದು ಈಗ ನನಗೆ ನೆನಪಿರುವುದಿಲ್ಲ. ನಾವು ಸದರಿ ಮನೆಗೆ ಹೋಗುವಾಗ ಸುಮಾರು 10-12 ಜನರು ಹೋಗಿರುತ್ತೇವೆ. ಸದರಿ ಮನೆಯಲ್ಲಿ ಒಂದೇ ಕೋಣೆ ಇದ್ದು, ಮುಂಬಾಗಿಲು ಮಾತ್ರ ಇತ್ತು. ಹಿಂಬಾಗಿಲು ಇರಲಿಲ್ಲ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಪೋಲಿಸರು ಇರಲಿಲ್ಲ. ಸದರಿ ಮನೆಯ ಸುತ್ತಮುತ್ತಲೂ ಬೇರೆ ವಾಸದ ಮನೆಗಳು ಇವೆ. ನಾವು ಮನೆಯೊಳಗೆ ಹೋದ ತಕ್ಷಣ ಮುಂಬಾಗಿಲು ಕಡೆ ಶಬಾನಾಳ ತಲೆ

ಇತ್ತು. ನಾವು ಸ್ಥಳಕ್ಕೆ ಹೋದ ಸುಮಾರು 15 ನಿಮಿಷಗಳ ನಂತರ ಚಾಸಾ-1 ರವರು ಪೋಲಿಸ ಠಾಣೆಗೆ ಹೋಗಿರುತ್ತಾರೆ. ನಂತರ ಅರ್ಧ ಗಂಟೆ ಸಮಯದ ನಂತರ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ಶಭಾನಾಳ ಶವದ ಮೇಲೆ ನಿಖರವಾಗಿ ಎಷ್ಟು ಗಾಯಗಳಿದ್ದವು ಎಂದರೆ ನನಗೆ ಗೊತ್ತಿಲ್ಲ.

14. ಪಂಚನಾಮೆಗೆ ಪಂಚರಾಗುವಂತೆ ಪೋಲಿಸರು ನನ್ನನ್ನು ಕೇಳಿಲ್ಲ. ನಾನು ಮರಾಠಿ ಭಾಷಾ ಮಾಧ್ಯಮದಲ್ಲಿ ಓದಿದ್ದು ಎಂದರೆ ಸರಿ. ನನಗೆ ಕನ್ನಡ ಸರಿಯಾಗಿ ಬರೆಯಲು ಗೊತ್ತಿಲ್ಲ ಎಂದರೆ ಸರಿ. ಆದರೆ ಕನ್ನಡ ಓದಲು ಸರಿಯಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಪಂಚನಾಮೆ ಬರೆದು, ಅದಕ್ಕೆ ಸಹಿ ಮಾಡಲು ಹೇಳಿದ್ದಕ್ಕೆ ನಾನು ಪಂಚನಾಮೆಗೆ ಸಹಿ ಮಾಡಿದ್ದು ಎಂದರೆ ಸರಿ. ಸ್ಥಳ ಪಂಚನಾಮೆಯ ಸಂದರ್ಭದಲ್ಲಿ ಚಾಸಾ-1 ರವರು ಹಾಜರಿದ್ದರು. ನಿಪಿ-8 ಪೋಟೊದಲ್ಲಿ ಸ್ಥಳದಲ್ಲಿ ರಕ್ತದ ಕಲೆಗಳು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಂಡುಬಂದ ಮೊಬೈಲ್ ಯಾವ ಕಂಪನಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಚಾಸಾ-4 ನೇಯವಳ ಬಟ್ಟೆಗಳಿಗೆ ರಕ್ತವಾಗಿತ್ತು. ಚಾಸಾ-4 ನೇಯವಳಿಗೆ ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ಚಾಸಾ-4 ನೇಯವಳು ಗಾಬರಿಯಲ್ಲಿ ಚಾಸಾ-1 ನೇಯವರಲ್ಲಿ ಏನು ಮಾತನಾಡಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿ ಯಾರು ಇಲ್ಲದಿದ್ದಾಗ ಘಟನೆ ನಡೆದಿದ್ದು ಎನ್ನುವ ವಿಷಯ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಮುಮಾ-7 ಚಾಕುವನ್ನು ಚಾಸಾ-1 ನೇಯವನೇ ಪೋಲಿಸರ ಮುಂದೆ ಹಾಜರು ಪಡಿಸಿ, ಅದನ್ನು ಆರೋಪಿ ಹಾಜರು ಪಡಿಸಿರುತ್ತಾನೆ ಎನ್ನುವಂತೆ ನಿಪಿ-15 ರಂತೆ ಸುಳ್ಳು ಪಂಚನಾಮೆ ಸೃಷ್ಟಿಸಿಕೊಂಡಿದ್ದು ಎಂದರೆ ಸರಿಯಲ್ಲ. ಆರೋಪಿಯು ಮುಮಾ-8 ರಿಂದ ಮುಮಾ-10 ವಸ್ತುಗಳನ್ನು ಪೋಲಿಸರ ಮುಂದೆ ಹಾಜರು ಪಡಿಸಿಲ್ಲ ಮತ್ತು ಆ ಬಗ್ಗೆ ಪೋಲಿಸರು ನನ್ನ ಸಮಕ್ಷಮ ನಿಪಿ-18 ರಂತೆ ಯಾವುದೇ

ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ-8 ರಿಂದ ಮುಮಾ-10 ವಸ್ತುಗಳನ್ನು ಚಾಸಾ-1 ರವರೇ ಪೋಲಿಸರ ಮುಂದೆ ಹಾಜರು ಪಡಿಸಿ ನಿಪಿ-18 ರಂತೆ ಸುಳ್ಳು ಪಂಚನಾಮೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ರಾತ್ರಿ 09.00 – 09.30 ಗಂಟೆಯೊಳಗೆ ಬರೆದು ಮುಗಿಸಿರುತ್ತಾರೆ. ನಂತರ ಪೋಲಿಸ ಠಾಣೆಯಿಂದ ಊರಿಗೆ ಬಂದಾಗ ಮಧ್ಯರಾತ್ರಿಯ ನಂತರ ಸುಮಾರು 02.00 ಗಂಟೆಯಾಗಿತ್ತು. ನಂತರ ಬೆಳಿಗ್ಗೆ ಪೋಲಿಸರು ಚಾಸಾ-1 ರವರಿಗೆ ಪೋನ್ ಮಾಡಿ ನನ್ನನ್ನು ಪೋಲಿಸ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ನಾನು ಮರುದಿನ ಪೋಲಿಸ ಠಾಣೆಗೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ನಿಪಿ-24 ಪಂಚನಾಮೆಗೆ ನಾನು ಹಿಂದಿನ ದಿನ ರಾತ್ರಿ ಪೋಲಿಸ ಠಾಣೆಯಲ್ಲಿ ಸಹಿ ಮಾಡಿದ್ದು ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-11 ರಿಂದ ಮುಮಾ-15 ವಸ್ತುಗಳನ್ನು ಪೋಲಿಸರು ನನ್ನ ಸಮಕ್ಷಮ ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಥಮ ಬಾರಿಗೆ ಶಭಾನಾದ ಶವ ನೋಡಿದ ಗುಲಾಬಿ ಬಣ್ಣದ ಹೂವಿನ ಡಿಜೈನ ಇದ್ದ ಗೌನ ಇತ್ತು. ಶಭಾನಾಳ ಕೊಲೆ ಬೆಳಗಿನ ಜಾವದಲ್ಲಿ ಯಾರೋ ಮಾಡಿದ್ದು ನನಗೆ ವಿಷಯ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.